ದಿನಾಂಕ 01-04-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ.ಎಂ.ಸಿ.ಡಿ ವಕೀಲರಿಂದಃ-

1. ನಾನು ಪಿ ಯು ಸಿ ವರೆಗೆ ಕಲಿತಿದ್ದೇನೆ. 2ನೇ ಪ್ರತಿವಾದಿ ನನ್ನ ಸ್ನೇಹಿತ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದು. ದಿನಾಂಕ 11.06.2012 ರ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿ,ಲ್ಲ 2ನೇ ಪ್ರತಿವಾದಿ ಹಾಜರುಪಡಿಸಿದ್ದಾರೆ. ಈ ಬಗ್ಗೆ 2ನೇ ಪ್ರತಿವಾದಿಯನ್ನು ಕೇಳಿ ತಿಳಿದುಕೊಂಡಿದ್ದೇನೆ. 2ನೇ ಪ್ರತಿವಾದಿ ಅಂತಹ ಕ್ರಯಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪ್ಯಾರ 2 ರಲ್ಲಿ ಹೇಳಿರುವ 11.06.2012ರ ಕ್ರಯಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ಸದರಿ ಕ್ರಯಪತ್ರದಲ್ಲಿ ಈ ದಾವೆಯ ವಾದಿ ವಿಜಯಕುಮಾರ ರವರಿಗೆ ಹಣ ಪಾವತಿಸುವ ಸಲುವಾಗಿ ಆಸ್ತಿಯನ್ನು ಮಾರಾಟ ಮಾಡುತ್ತಿದ್ದೇನೆಂದು ನಮೂದು ಇಲ್ಲ. ಆ ರೀತಿ ಕ್ರಯಪತ್ರದಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ಸಬ್ ರಿಜಿಸ್ಟ್ರರ ಕಛೇರಿ ಇರುವುದು ಕೆಳಮಂಗಲದಲ್ಲಿ. ಅಲ್ಲಿ ವ್ಯವಹಾರ ಮಧ್ಯಾಹ್ನ 3 ರಿಂದ 5 ಗಂಟೆಯವರೆಗೆ ಅಯಿತು. 2ನೇ ಪ್ರತಿವಾದಿ ಆತನಿಗೆ ಸೇರಿದ ಸ್ವತ್ತನ್ನು ಮಾರಾಟ ಮಾಡಿ ಬಂದ ಹಣದಿಂದ ಈ ದಾವೆಯ ವಾದಿಗೆ ದಿನಾಂಕ 11.06.2012 ರಂದು ಪಾವತಿ ಮಾಡುತ್ತಾರೆಂದು ತೋರಿಸಲು ದಾಖಲೆ ಇದೆಯಾ ಎಂದರೆ ಅಗ್ರಿಮೆಂಟ್ ಇದೆ ಎಂದು ನುಡಿಯುತ್ತಾರೆ. ಸದರಿ ಅಗ್ರಿಮೆಂಟನ್ನು ನಾನು ನೋಡಿದ್ದೇನೆ ಅದನ್ನು

ಬರೆದದ್ದು ರಮೇಶ್ ರವರು. ಅದು 1 ಪುಟದ ಅಗ್ರಿಮೆಂಟ್. ಸದರಿ ಅಗ್ರಿಮೆಂಟಿಗೆ ವಿಜಯಕುಮಾರ, ವಿನುತ ಇನ್ನೂ ಇಬ್ಬರು ಸಾಕ್ಷಿದಾರರು ಸಹಿ ಮಾಡಿದ್ದಾರೆ. ಅವರ ಹೆಸರು ಗೊತ್ತಿಲ್ಲ. ನಾನು ಆಗ ಇರಲಿಲ್ಲ ಎಂದರೆ ಇದ್ದೇ. ಸದರಿ ಅಗ್ರಿಮೆಂಟಿಗೆ ನಾನು ರುಜು ಹಾಕಲು ನನಗೆ ತೊಂದರೆ ಇರಲಿಲ್ಲ.

2. ನಿಶಾನೆ ಎನ್ -1 ರಲ್ಲಿ ನಮೂದಿಸಿರುವ ದಿನಾಂಕದಂದು ವಾದಿಗೆ ಯಾವುದೇ ಹಣ ಪಾವತಿ ಅಗಿಲ್ಲ ಎಂದರೆ ಸರಿಯಲ್ಲ. ಆ ದಿನ ವಾದಿ ಪ್ರತಿವಾದಿ 1 ಮತ್ತು 2 ರವರಿಗೆ ಯಾವುದೇ ರಸೀದಿ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಶಾನೆ ಎನ್-1 ರಲ್ಲಿ ನಮೂದಾಗಿರುವ 16ಲಕ್ಷ ರೂಪಾಯಿ ಪ್ರತಿವಾದಿಗೆ ಎಲ್ಲಿಂದ ಬಂತು ಎಂದು ನಿಮಗೆ ಹೇಳಲಿಕ್ಕೆ ಅಗಿವುದಿಲ್ಲ ಎಂದರೆ ಸಾಕ್ಷಿ ಹೇಳುತ್ತೇನೆಂದು ನುಡಿಯುತ್ತಾರೆ. ಪ್ರತಿವಾದಿ 1 ಮತ್ತು 2 ರವರು ವಾದಿಗೆ ಬರೆದುಕೊಟ್ಟಿರುವ ಕರಾರು ಪತ್ರವನ್ನು ನಾನು ನೋಡಿಲ್ಲ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಪ್ಯಾರ 4 ರಲ್ಲಿ ಹೇಳಿರುವ ನಮಾಕಾವಸ್ತೇ ಕ್ರಯದ ಕರಾರು ಪತ್ರ ಎಂದು ಹೇಳಿರುವುದು ಸುಳ್ಳು ಎಂದರೆ ಸಾಕ್ಷಿ ಅದು ಮಹೇಶ್ ಕುಮಾರ ರವರಿಗೆ ಸೇಲ್ ಡೀಡ್ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಪ್ಯಾರ 4 ರಲ್ಲಿ ಹೇಳಿರುವ ವಿಚಾರವನ್ನು ನೀವು ಬರೆಸಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ವಾದಿಗೆ ನಿಶಾನೆ ಎನ್ -1 ರ ಹಣವನ್ನು ಕೊಡದಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯನ್ನು ಕಳೆದ ಬಾರಿ ನೋಡಿದ್ದೀರಿ ಎಂದರೆ ಸಾಕ್ಷಿ 20 ವರ್ಷಗಳಿಂದ ನೋಡಿದ್ದೇನೆಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾರೆ. ನಿಶಾನೆ ಎನ್ 1 ನ್ನು ವಾದಿ

ಪ್ರತಿವಾದಿಗಳಿಗೆ ಯಾವತ್ತೂ ಬರೆದುಕೊಟ್ಟಿಲ್ಲ ಆ ಪ್ರಕಾರ ಹಣ ಪಡೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.